## ಅಧ್ಯಾಯ – 10

# ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ವೇತನ ವಿವರ

## [ಸೆಕ್ಷನ್ 4(1) (ಬಿ)(x)]

ಕ.ರಾ.ರ.ಸಾ. ನಿಗಮದ ನಿರ್ದೇಶಕ ಮಂಡಳಿಯು ದಿನಾಂಕ 22-09-2008ರ ಸಭೆಯಲ್ಲಿ ಠರಾವು ಸಂಖ್ಯೆ.8987ರ ಅನ್ವಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಹಾಗೂ ಈ.ಕ.ರ.ಸಾ.ಸಂಸ್ಥೆ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ನೌಕರರ ಹಾಗೂ ಪೂರ್ವ ಕಿಂಕೋ ನೌಕರರ ಹಾಗೂ ಅಧಿಕಾರಿಗಳ ವೇತನ ಶ್ರೇಣಿಯನ್ನು ದಿನಾಂಕ 01-01-2008 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ತೀರ್ಮಾನಿಸಿ ಕರ್ನಾಟಕ ರಾಜ್ಯ ಸರ್ಕಾರದ ಅನುಮೋದನೆ ಕೋರಿದ್ದು, ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಪುರಸ್ಕರಿಸಿ ದಿನಾಂಕ 01-01-2008 ರಿಂದ ನಾಲ್ಕು ವರ್ಷಗಳ ಅವಧಿಗೆ ಜಾರಿಗೊಳಸುವಂತೆ ಪತ್ರ ಸಂಖ್ಯೆ. ಸಾರಿಇ 252 / ಸಾಸಂಇ 2008 ದಿನಾಂಕ 12-01-2009ರ ಅನ್ವಯ ಅನುಮೋದನೆ ನೀಡಿರುತ್ತದೆ. ಈ ರೀತಿ ಪರಿಷ್ಕರಣೆಗೊಂಡ ಹಾಲಿ ಚಾಲ್ತಿಯಲ್ಲಿರುವ ಹುದ್ದೆವಾರು ವೇತನ ಶ್ರೇಣಿ ವಿವರಗಳು ಅನುಬಂಧ 9 ರಲ್ಲಿರುತ್ತವೆ.

ನಿಗಮದ ಕೇಂದ್ರ ಕಛೇರಿಯಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಗಳಗೆ ನಿಯಮಾನುಸಾರ ನೀಡಲಾಗುತ್ತಿರುವ ವೇತನ ಹಾಗೂ ಅವರು ಹೊಂದಿರುವ ಹುದ್ದೆ, ಹುಟ್ಟಿದ ದಿನಾಂಕ, ಭವಿಷ್ಯ ನಿಧಿ ಸಂಖ್ಯೆ ವಿವರಗಳನ್ನು ಅನುಬಂಧ 10 ರಲ್ಲಿ ನೀಡಲಾಗಿದೆ. ನಿಗಮದ ವಿಭಾಗ ಮತ್ತು ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರಗಳನ್ನು ಆಯಾ ವಿಭಾಗ/ಘಟಕಗಳ ಮುಖ್ಯಸ್ಥರು ಅಥವಾ ಸಂಬಂಧಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮೂಲಕ ಪಡೆಯಬಹುದಾಗಿದೆ.